International Journal of Kannada Research
www.kannadajournal.com

ISSN: 2454–5813
IJKR 2018; 4(3): 23-25
© 2018 IJKR
www.kannadajournal.com
Received: 15-05-2018
Accepted: 17-06-2018

**Sunil Siddanna Jabadi**
Research Scholar,
Dept. of Kannada,
Gulbarga University,
Kalaburagi, Karnataka,
India

Correspondence
**Sunil Siddanna Jabadi**
Research Scholar,
Dept. of Kannada,
Gulbarga University,
Kalaburagi, Karnataka,
India

# ವಚನಕಾರರ ದೃಷ್ಟಿಯಲ್ಲಿ ಸ್ತ್ರೀ

## ಸುನೀಲ ಸಿದ್ದಣ್ಣ ಜಾಬಾದಿ

ಭಾರತೀಯ ಸಂಸ್ಕೃತಿಕ ಇತಿಹಾಸದಲ್ಲಿ ಧರ್ಮ ದರ್ಶನಗಳು ಹಾಸುಹೊಕ್ಕಾಗಿವೆ. ಈ ದೇಶವು ಅನೇಕ ಜಾತಿ ಜನಾಂಗಗಳಿಂದ ಕೂಡಿಕೊಂಡಿದೆ. ಆದ್ದರಿಂದ ಇಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ಶ್ರೇಣಿಕೃತವಾಗಿ ಹಣಿದ ಜಾತಿ ವ್ಯವಸ್ಥೆಯಾಗಿದೆ. ಇಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯನನ್ನು ಹೊರತು ಪಡಿಸಿ ಶೂದ್ರರನ್ನು ನಾಯಿ, ನರಿ, ಹಂದಿಗಳಿಗಿಂತ ಕಡೆಯಾಗಿ ಕಾಣುತ್ತಿದ್ದರು. ಇಂತಹ ವ್ಯವಸ್ಥೆಯಲ್ಲಿ ಯಾವುದೇ ವರ್ಗಕ್ಕೆ ಸೇರಿದ ಹೆಣ್ಣನ್ನು ಶೂದ್ರವರ್ಗಕ್ಕಿಂತ ಕಡೆಯಾಗಿ ಕಾಣುತ್ತಿದ್ದರು. ಹೀಗಾಗಿ ಭಾರತದಲ್ಲಿ ಧರ್ಮದ ಕಲ್ಪನೆ ಊಹೆ ವಿಚಾರಗಳಿಗೆ ನಿಲುಕದಷ್ಟು ಸನಾತನವಾಗಿದೆ.

ವೇದ ಪೂರ್ವದ ಕಾಲವನ್ನು ದ್ರಾವಿಡ ಸಂಸ್ಕೃತಿಯ ಕಾಲವೆಂದು ಕರೆಯಲಾಗುತ್ತದೆ. ಅಂದಿನ ದ್ರಾವಿಡ ಸಂಸ್ಕೃತಿಯನ್ನು ಸಿಂಧು ಸಂಸ್ಕೃತಿ ಎಂದು ಕರೆದಿದ್ದಾರೆ. ಸಿಂಧು ಸಂಸ್ಕೃತಿಯ ಕಾಲದಲ್ಲಿ ಧಾರ್ಮಿಕ ಭಾವನೆಗಳ ಬಗೆಗೆ ಆಲೋಚಿಸಿದ ತಜ್ಞರು "ಸಿಂಧು ಸಂಸ್ಕೃತಿಯಲ್ಲಿ ಧಾರ್ಮಿಕ ಭಾವನೆಯ ಪರಿಪಕ್ವ ಸಂಕೇತಗಳು ವ್ಯಕ್ತವಾಗಿವೆ"[1] ಎಂದು ಅಭಿಪ್ರಾಯ ಪಟ್ಟಿದ್ದಾರೆ. ಖ್ಯಾತ ಇತಿಹಾಸ ತಜ್ಞರಾದ "ಶ್ರೀ ಎಸ್. ಕುನ್ಹನರಾಜಾ ಅವರು ತಮ್ಮ ಒಂದು ಲೇಖನದಲ್ಲಿ ಇಂದು ನಮ್ಮಲ್ಲಿ ಕಾಣುವ ಅನೇಕ ಧಾರ್ಮಿಕ ಶ್ರದ್ಧೆ, ಉಪಾಸನೆ, ವಿಚಾರಗಳ ಮೂಲವನ್ನು ಅವೈದಿಕವೆಂದು ಗ್ರಹಿಸುತ್ತಾರೆ. ಇವುಗಳಲ್ಲಿ ಮಾತ್ರ ದೇವತಾ ಪೂಜೆ (ಶಕ್ತಿ ಪೂಜೆ) ನಿಸರ್ಗ ದೇವತೆಗಳ ಆರಾಧಕರಾಗಿದ್ದರು"[2] ಎಂದು ಹೇಳಲಾಗುತ್ತದೆ. ಹೀಗಾಗಿ ಅಂದಿನ ಕಾಲದಲ್ಲಿ ಸ್ತ್ರೀಯನ್ನು ದೇವತೆಯೆಂದು, ನಿಸರ್ಗದಂತೆ ಇವಳು ಕೂಡ ಚೇತನ ಶಕ್ತಿಯಾಗಿದ್ದಾಳೆ, ಜೀವವನ್ನು ಸೃಷ್ಟಿಸುವ ದೇವತೆಯೆಂದು ಹೆಣ್ಣಿನ ಮೂಲಕ ಆಗುವ ಸ್ಪಷ್ಟ ಕಾರ್ಯವನ್ನು ಅಂದಿನ ಮಾನವ ಅದ್ಭುತ ದೇವಿ ಕಾರ್ಯವೆಂದು ಆರಾಧಿಸುತ್ತಿದ್ದರು. ಸ್ತ್ರೀಯನ್ನು ದೇವತಾ ಸ್ವರೂಪವಾಗಿ ಕಾಣುತ್ತಿದ್ದ ಆ ಕಾಲದಲ್ಲಿ ಸಿಕ್ಕಿರುವ ಅನೇಕ ಕುರುಹುಗಳು ಸಾಕ್ಷಿಯಾಗಿವೆ. "ಸ್ತ್ರೀಯರ ಜನಂಗದ ಬಗ್ಗೆ ತಳೆದ ಮನೋಭಾವ, ಅಲ್ಲಿ ದೊರೆತ ಗರ್ಭಿಣಿಯರ ವಿಗ್ರಹಗಳು, ಕಿರೀಟಧಾರಿ ಹೆಣ್ಣಿನ ಗೊಂಬೆಗಳು ಮತ್ತು ಇತರೆ ಆಧಾರ ಅವಶೇಷಗಳಿದ್ದವು"[3] ಎಂದು ತಿಳಿದು ಬರುತ್ತದೆ. ಹೀಗಾಗಿ ಸಿಂಧು ಸಂಸ್ಕೃತಿಯಲ್ಲಿ ಹೆಣ್ಣನ್ನು ಅತ್ಯಂತ ಪೂಜ್ಯಭಾವನೆ ಮತ್ತು ಗೌರವ ಭಾವನೆಯಿಂದ ಕಾಣುತ್ತಿದ್ದರು. ಅಷ್ಟೇಯಲ್ಲದೆ ಸ್ತ್ರೀ ಪುರುಷ ಸಮಾನರು ಯಾವುದೇ ಶುಭ–ಅಶುಭ ಕಾರ್ಯಗಳಲ್ಲಿ ಸ್ತ್ರೀ–ಪುರುಷರು ಒಟ್ಟಾಗಿ ಭಾಗಿಯಾಗುತ್ತಿದ್ದರು. ಆದ್ದರಿಂದ ಈ ಕಾಲವನ್ನು ಹೆಣ್ಣು ಮಕ್ಕಳ ಸುವರ್ಣಯುಗವೆಂದು ಕರೆಯಬಹುದು.

ಅದೇ ವೇದಗಳ ಕಾಲಕ್ಕೆ ಸ್ತ್ರೀ ಪುರುಷನ ಸಹಯೋಗದಿಂದ ಮಾಡಬೇಕಾದುದರಿಂದ ಅಂದು ಸ್ತ್ರೀಗೆ ಧರ್ಮಾದಿ ಎಂಬುದು ಪಡೆಯುವ, ಕೂಡುವ, ನಿಯಮಗಳಿದ್ದವು. ಸ್ತ್ರೀಯು ಅಂದು ಪುರುಷನೊಂದಿಗೆ ನಿಲ್ಲಬೇಕಾದರೆ ಅವಳು ವೇದ ಉಪನಿಷತ್ತುಗಳ ನಿಯಮವನ್ನು ಪಾಲಿಸಬೇಕಾಗಿತ್ತು. ಇಲ್ಲಿ ನಿಯಮವನ್ನು ಪಾಲಿಸಿದರೆ ಹೆಣ್ಣು ಗಂಡಿನ ಸಮಾನಳು ಎಂಬ ಭಾವನೆಯಾದರು ಇತ್ತು ಅಂತಹ ಸಾಧನೆ ಮಾಡಿದ ಹೆಣ್ಣು ಮಕ್ಕಳಲ್ಲಿ "ಘೋಷಾ, ಅಪಾಲಾ, ವಿಶ್ವಾವಾರಾ, ಇಂದ್ರಾಣಿ ಇವರು ಮಂತ್ರರಚಕರಾಗಿದ್ದರೆಂದು ಹೇಳಲಾಗುತ್ತದೆ"[4].

---

[1] ವಚನಕಾರರ ದೃಷ್ಟಿಯಲ್ಲಿ ಸ್ತ್ರಿ, ಪು. 9.

[2] ತಪೊಪ, ಪು. 22.

[3] ವಚನಕಾರರ ದೃಷ್ಟಿಯಲ್ಲಿ ಸ್ತ್ರಿ, ಪು. 10.

[4] PWHC (ASA) p. 198, ಇಂದ್ರಾಣಿ ಒಂದೆಡೆ ಆನೇ ಹೊಸ ಯಜ್ಞ ಕ್ರಿಯೆಗಳು ಆರಂಭಸಿದುದಾಗಿ ತಿಳಿಸುತ್ತದೆ. ಮೊತ್ತಬ್ಬ ಮಹಿಳೆ, ಸೋಮ ಬಳ್ಳಿಯನ್ನು ತಿಂದು ಅರ್ಪಿಸಿ ಇಂದ್ರನಿಂದ ಪುರಸ್ಕೃತಳಾಗುತ್ತಾಳೆ. ಅಪಾಲಾ ಇಂದ್ರನನ್ನು ಪ್ರಾರ್ಥಿಸಿ ಸುತ್ವಚೆಯಾದಳು. ಘೋಷಾ ವೇದಾಧ್ಯಯನ ಬಹುಕಾಲ ಕಳೆದು ಇಳಿ ವಯಸ್ಸಿನಲ್ಲಿ ಮದುವೆಯಾದಳು.

ಋಗ್ವೇದದ ಕಾಲದಲ್ಲಿ ಸ್ತ್ರೀಯರ ಕುರಿತಾದ ಎರಡು ಬಗೆಯ ವಿಚಾರಗಳು ಬರುತ್ತವೆ. (1) ಬ್ರಹ್ಮವಾದಿನಿಯರು (2) ಸದ್ಯೋವಧುಗಳು ಎಂದು ಇದನ್ನೆಲ್ಲ ಗಮನಿಸಿದ್ದಾಗ ಋಗ್ವೇದದ ಕಾಲಕ್ಕೆ ವೈರಾಗ್ಯಕ್ಕೆ ಮಹತ್ವವಿರಲಿಲ್ಲ ಎಂದೇನಿಸುತ್ತದೆ. ಆದರೆ ಎಲ್ಲೋ ಒಂದು ಕಡೆ ಹೆಣ್ಣಿಗೆ ನಿರ್ಭಂದನೆ ಹೇರುವುದರ ಮೂಲಕ ಅವಳನ್ನು ಗುಲಾಮಳಂತೆ ಕಂಡಿದ್ದು ಕಂಡು ಬರುತ್ತದೆ.

ವೈದಿಕ ಧರ್ಮ ಅಥವಾ ಹಿಂದೂ ಧರ್ಮದ ಕಾಲಕ್ಕೆ ಸ್ತ್ರೀಯನ್ನು ನೋಡಿದಾಗ ಸ್ತ್ರೀಯಿಂದ ಪುರುಷನನ್ನು ಬೇರ್ಪಡಿಸಿ, ಸ್ವಾತಂತ್ರವಾಗಿ ಬದುಕುತ್ತಿದ್ದ, ಅಧಿಕಾರವನ್ನು ಕಸಿದುಕೊಂಡು ಪುರುಷನ ಗುಲಾಮಳಾಗಿ ಮಾಡಲಾಗಿತ್ತು. ಎ.ಬಿ. ಕೈತ್ ಅವರು ಹಿಂದೂ ಧರ್ಮದ ಕುರಿತು "ಭಾರತದಲ್ಲಿ ಇಂದಿಗೂ ನಾರಿ ಎಲ್ಲ ಧರ್ಮಗಳಿಂದ ತುಳಿತಕ್ಕೀಡಾಗಿದ್ದಾಳೆ... ಆದರೆ ಹಿಂದೂ ಧರ್ಮ ಅಥವಾ ಬ್ರಾಹ್ಮಣರ ಕಾಲದಲ್ಲಿ ಬ್ರಾಹ್ಮಣರಿಂದ ಆದ ಹೀನಾಯವಾಗಿ ತಿರಸ್ಕೃತಳಾದಷ್ಟು, ತುಳಿಸಿಕೊಂಡಷ್ಟು ಈ ಜಗತ್ತಿನ ಬೇರೆ ಯಾವ ಧರ್ಮದಿಂದಲೂ ತುಳಿತಕ್ಕೆ ಒಳಗಾಗಿಲ್ಲ"[5] ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಕಾಲಕ್ಕೆ ಸ್ತ್ರೀಯನ್ನು ಅತ್ಯಂತ ತುಚ್ಛ ಮತ್ತು ಹೀನಾಯವಾಗಿ ಕಾಣಲಾಗುತ್ತಿತ್ತು. ಅಂದು ಮನು ಬರೆದ ಮನುಸ್ಮೃತಿಯೇ ಆ ಕಾಲದ ಕಾನೂನಾಗಿತ್ತು. ಹೀಗಾಗಿ ಪ್ರತಿಯೊಬ್ಬರು ಅದನ್ನು ಪಾಲನೆ ಮಾಡಬೇಕಾಗಿತ್ತು. ಇಲ್ಲಿ "ಸ್ತ್ರೀಗೆ ಮನುನ ದೃಷ್ಟಿಯಲ್ಲಿ ಯಾವ ರೀತಿಯ ಸ್ವಾತಂತ್ರ್ಯವಿಲ್ಲ, ಸ್ತ್ರೀಯ ಧರ್ಮ ಸಾಧನೆ, ಆಧ್ಯಾತ್ಮ ಸ್ವಾತಂತ್ರ್ಯ ಇವೆಲ್ಲ, ಅನಗತ್ಯವಾದವುಗಳು ಅವಳ ಪ್ರಕೃತ ಧರ್ಮಕ್ಕೆ ಅವು ವಿರುದ್ಧವೆಂದೆ ಅವನ ಕಲ್ಪನೆ"[6] ಸ್ತ್ರೀ ಕೇವಲ ಭೋಗದ ವಸ್ತು, ಅವಳು ನಾಲ್ಕು ಗೋಡೆಗಳ ಮಧ್ಯದಲ್ಲೆ ಬದುಕಬೇಕು, ಅವಳು ಮಕ್ಕಳನ್ನು ಹೆರುವ ಪೋಷಿಸುವ ಹೆರಿಗೆ ಯಂತ್ರ, ಪುರುಷನಿಗೆ ಆಗಬೇಕಾದ ಸಂಸ್ಕಾರಗಳೆಲ್ಲ ಸ್ತ್ರೀಯರಿಗೂ ಆಗಬೇಕಾಗಿಲ್ಲ, ಒಂದು ವೇಳೆ ನಡೆದುದ್ದೆ ಆದರೂ ಅದು ಮಂತ್ರ ರಹಿತವಾಗಿ ನಡೆಯಬೇಕು ಎಂಬುವುದೇ ಅವನ ವಿಚಾರ.

**ಉದಾಹರಣೆ:** "ವೈವಾಹಿಕೋ ವಿಧಿ: ಸ್ತ್ರೀಣಾಂ ಸಂಸ್ಕಾರೋವೈದಿಕ: ಸ್ಮೃತ: (1) ಪತಿಸೇವಾ ಗುರೌವಾಸಃ ಗೃಹಾರ್ಥೋಗ್ನಿ ಪರಿಕ್ರಿಯಾ"[7]. ಅಂದರೆ ವಿವಾಹವೇ ಸ್ತ್ರೀಯರಿಗೆ ಉಪನಯನ (ವೇದ ಸಂಸ್ಕಾರ) ಪತಿ ಸೇವಿಯೇ ಗುರುಗೃಹವಾಸ, ಗೃಹ ಕಾರ್ಯವೇ ಅಗ್ನಿಪರಿಕ್ರಿಯೆ ಸ್ತ್ರೀಯರಿಗೆ ಉಪನಯನ ವಿವಾಹವೇ ಜ್ಞಾನ, ಜಪ, ತಪದಿ ಪೂಜೆ ಹೋಮಗಳಿಂದ ಸ್ವತಂತ್ರವಾಗಿ ಭಾಗಿಯಾಗದೆ ಇವುಗಳಿಂದ ದೂರವಿರಬೇಕೆಂದು ಹೇಳುತ್ತದೆ. ಹೀಗಾಗಿ ವೈದಿಕ ಧರ್ಮದಲ್ಲಿ ಮನುಸ್ಮೃತಿಯೇ ಧಾರ್ಮಿಕ ಗ್ರಂಥವಾಗಿದ್ದರಿಂದ ಸ್ತ್ರೀಯನು ಅತ್ಯಂತ ಕೀಳಾಗಿ ಕಂಡಿತ್ತು.

ಈ ಧರ್ಮದಲ್ಲಿ ಹೆಣ್ಣು ಕೇವಲ ಭೂಗದ ವಸ್ತು, ಮಕ್ಕಳನ್ನು ಹೆರುವ ಹೆರಗೆ ಯಂತ್ರವಾಗಿ ಸ್ವಾತಂತ್ರ್ಯವಿಲ್ಲದೆ ಶುಭ ಸಮಾರಂಭಗಳಿಗೆ ಯೋಗ್ಯಳಲ್ಲದವಳು ಎಂದು ದೂರವಿಟ್ಟವಳನ್ನು ಮತೆ ಜೈನ ಧರ್ಮದಲ್ಲಿ ಕೆಲವೊಂದು ನಿಯಮಗಳಿಂದ ಸ್ವಾತಂತ್ರ್ಯದ ಕಡೆ ಸ್ತ್ರೀ ಹೆಜ್ಜೆ ಹಾಕಿದ್ದಾಳೆ. ಜೈನ ಧರ್ಮದಲ್ಲಿ ಹೆಣ್ಣಿಗೆ ಕೆಲವೊಂದು ಕಡೆಗಳಲ್ಲಿ ಸ್ವಾತಂತ್ರ್ಯ ಸಿಕ್ಕಿತು ಈ ಧರ್ಮದಲ್ಲಿ ಶ್ವೇತಾಂಬರ, ದಿಗಂಬರ ಎಂಬ ಪಂಗಡಗಳಿದ್ದವು. ಇದರಲ್ಲಿ ಶ್ವೇತಾಂಬ ಎಂದರೆ "ಜೈನ ಧರ್ಮದ ಪ್ರಕಾರ ಸ್ತ್ರೀಗೆ ಧರ್ಮಾಧಿಕಾರವುಂಟು ಆಕೆ ಇದೇ ಜನ್ಮದಲ್ಲಿ ಕೈವಲ್ಯ ಸಾಧಿಸಬಲ್ಲಳು ಆದರೆ ದಿಗಂಬರರ ವಿಚಾರ ಹಾಗಿಲ್ಲ. ಸ್ತ್ರೀ ತನ್ನ ತಪ್ಪಾ ವೈರಾಗ್ಯ ಸಾಧನೆಗಳಿಂದ ಪುರುಷ ಜನ್ಮ ಪಡೆದು ಆ ಜನ್ಮದಲ್ಲಿ ಮುಕ್ತಿ ಸಾಧಿಸಬಲ್ಲಳು. ಪುರುಷ ತನ್ನ ಸಾಧನೆಯಿಂದ ಇಹ ಜನ್ಮದಲ್ಲಿಯೇ ಭವಾವಳಿಗಳಿಂದ ಬಿಡುಗಡೆ ಹೊಂದಿ ಅರ್ಹತೆ ಪದವಿಗೆ ಅರ್ಹನಾಗುತ್ತಾನೆ. ಆದರೆ ಸ್ತ್ರೀ ಮಾತ್ರ ಪುರುಷ ಜನ್ಮ ಪಡೆಯದ ಹೊರತು ಅರ್ಹತ ಪದವಿ ಸಾಧಿಸಳು ಎಂದು ನಿಯಮಗಳಿವೆ"[8] ಉದಾಹರಣೆಗೆ ಇಪ್ಪತನಾಲ್ಕು ಜನ ತೀರ್ಥಂಕರರಲ್ಲಿ 19ನೇಯ ತೀರ್ಥಂಕರನಾದ ಮಲ್ಲಿನಾಥ ತೀರ್ಥಂಕರನನ್ನು ದಿಗಂಬರ ಪಂಥ ಪುರುಷನೆಂದು ಭಾವಿಸುತ್ತದೆ. ಶ್ವೇತಾಂಬರರು ಮಲ್ಲಿ ಎಂಬ ಸ್ತ್ರೀ ತೀರ್ಥಂಕರ ಪದ ಸಾಧಿಸಿದಳು ಎನ್ನುತ್ತಾರೆ. ಮಹಾವೀರನ "ಚಿಕ್ಕಮ ಚಂದನಾ ಸ್ತ್ರೀ ಸನ್ಯಾಸಿನಿಯರಿಗೆ ಮೇಲ್ವಿಚಾರಕಿಯಾಗಿದ್ದಳು. ಈಕೆಯ ಶಿಷ್ಯತ್ವವನ್ನು ವಹಿಸಿದ ಸ್ತ್ರೀಯರು 30 ಸಾವಿರ"[9] ಸಂಖ್ಯೆಗೆ ಸೇರಿದ್ದಾರೆ. ಹೀಗೆ ಹೆಣ್ಣಿಗೆ ಸ್ವಾತಂತ್ರ್ಯ ಸಿಕ್ಕರು ಒಂದಲ್ಲಾ ಒಂದು ರೂಪದಲ್ಲಿ ಅವಳನ್ನು ಶೋಷಣೆ ಮಾಡಲಾಗುತ್ತದೆ.

ಜೈನ ಧರ್ಮ ನಂತರ ಬೌದ್ಧಧರ್ಮದ ಉದಯ ಕಾಲದಲ್ಲಿ ಭಾರತೀಯ ಧಾರ್ಮಿಕ ಜಗತ್ತಿನಲ್ಲಿ ತುಂಬಗೊಂದಲಮಯವಾದ ವಾತಾವರ್ಣದಿಂದ ಕೂಡಿಕೊಂಡಿತ್ತು. ಅದರಲ್ಲೂ ಸ್ತ್ರೀ ಸಂಬಂಧ ಬುದ್ಧನ ವಿಚಾರಗಳು ಹಿಂದೂ ಮಹಿಳಾ ಜೀವನದಲ್ಲಿ ಒಂದು ಹೊಸ ತಿರುವನ್ನೇ ಒದಗಿದವು ಸಿಂಧೂ ಸಂಸ್ಕೃತಿಯ ನಂತರ ಸ್ತ್ರೀಯರಿಗೆ ತಮ್ಮದೆಯಾದ ವ್ಯಕ್ತಿತ್ವವಿದೆ ಎಂದು ತಿಳಿದಿದ್ದು ಅದು ಬೌದ್ಧ ಧರ್ಮದ ಮೂಲಕ. ಇಲ್ಲಿ ಹೆಣ್ಣು ಗಂಡು ಎಂಬ ಬೇಧಭಾವ ಮಾಡದೆ ಎಲ್ಲರೂ ಸಮಾನರು ಎಂದು ಬುದ್ಧ ಸಾವಿರಾರು ಸಂಖ್ಯೆಯಲ್ಲಿ ಮಹಿಳೆಯರನ್ನು ಸಂಘಕ್ಕೆ ಸೇರಿಸಿದ್ದಾನೆ. ಸುಮೇಧಾ, ಸಂಘಮಿತ್ರ, ಗುಪ್ತಾ, ಸುಂದರಿ ನಂದಾ, ಮೊದಲಾದವರು ಬೌದ್ಧ ಧರ್ಮ ತತ್ತ್ವ, ಸಿದ್ಧಾಂತಗಳಲ್ಲಿ ಪಾಂಡಿತ್ಯಗಳಿಸಿ ಉತ್ತಮ ಸಾಧಕಿಯರೆನಿಸಿಕೊಂಡಿದ್ದಾರೆ. ಇವರು ಪುರುಷನಂತೆ ಅವರೂ ಕೂಡಾ ಹೊರ ರಾಷ್ಟ್ರಗಳಿಗೆ ಪ್ರಯಾಣ ಬೆಳೆಸಿ ಧರ್ಮ ಪ್ರಚಾರ ಕಾರ್ಯವನ್ನು ಮಾಡುತ್ತಿದ್ದರು. ಇವರೆ ಸ್ವತ ಬೋಧನೆ, ದೀಕ್ಷೆ, ಕೊಡುವ ಕಾರ್ಯವನ್ನು, ನಿರ್ವಹಿಸುತ್ತಿದ್ದಾರೆಂದು ತಿಳಿದು ಬರುತ್ತದೆ. ಬುದ್ಧನ ಕಾಲಕ್ಕೆ ಸ್ತ್ರೀಗೆ ಸಿಕ್ಕ ಸ್ವಾತಂತ್ರ್ಯವನ್ನು ಬೌದ್ಧ ಧರ್ಮದ ಅವನತಿಯ ಕಾಲದ ನಂತರ ಮತ್ತೇ ವೈದಿಕ ಧರ್ಮದ ಸ್ಥಾಪನೆಯಾಯಿತು. ಮುಂದೆ ಮನು ಬರೆದ ಗ್ರಂಥವನ್ನು ಜಾರಿಗೊಳಿಸಿ ಹೆಣ್ಣನ್ನು ಗುಲಾಮಳಾಗಿ ನೋಡಲಾಯಿತು. ಹೀಗೆ ನೂರಾರು ವರ್ಷಗಳವರೆಗೆ ಹೆಣ್ಣಿನ ಮೇಲೆ ಶೋಷಣೆ ದಬ್ಬಾಳಿಕೆ ನಡೆಸಿ ಪುರುಷನ ಗುಲಾಮಳನಾಗಿ ಪುರುಷನ ಕೈಗೊಂಬೆಯಂತೆ ಮಾಡಿ ಮಾತನಾಡುವ ಧ್ವನಿಯನ್ನು ಕಸಿದುಕೊಂಡಿತ್ತು. ಆದರೆ ಹನ್ನೆರಡನೆಯ ಶತಮಾನದಲ್ಲಿ ಶರಣರ ಕ್ರಾಂತಿಯಿಂದ ಹೆಣ್ಣು ಮತ್ತೆ ಸ್ವತಂತ್ರಳಾದಳು ಅಂದು ಎಲ್ಲ ಪುರುಷರೊಂದಿಗೆ ಸಮಾನವಾಗಿ ಬದುಕುತ್ತಿದ್ದಳು. ಆದ್ದರಿಂದ ಈ ಕಾಲ ಘಟ್ಟವನ್ನು ಜೀವ ಪರವಾದ ಜನಪರವಾದ ಶ್ರಮ ಜೀವಿಗಳ, ದುಡಿಯುವ ವರ್ಗದ ಧ್ವನಿಯಾಗಿತ್ತು. ಇದು ದನಿಕ ಸಾಹಿತ್ಯವಾಗಿರಲಿಲ್ಲ. ಇಲ್ಲಿ ಎಲ್ಲರೂ ಒಂದಲ್ಲಾ ಒಂದು ರೀತಿಯಲ್ಲಿ ತುಳಿತಕ್ಕೆ ಒಳಗಾದವರೆ ಇದ್ದಾರೆ. ಹೀಗಾಗಿ ಇದು ಸಾಮಾನ್ಯ ಜನರ ಬದುಕಿಗೆ ಹತ್ತಿರವಾದ ಚಳವಳಿಯಾಗಿತ್ತು. ಈ ಕಾಲದಲ್ಲಿ ಹೆಣ್ಣು ಪುರುಷನ ಸಮಾನವಾಗಿ ಮಾತನಾಡುವ, ಪ್ರಶ್ನಿಸುವ, ಹಕ್ಕನ್ನು ಪಡೆದುಕೊಂಡಿದ್ದಳು. ಹೆಣ್ಣು

[5] ಬ್ರಹ್ಮವಾದಿನಿಯರು: ವೇದಾಧ್ಯಯನ ಮಾಡುತ್ತ ಬಹುಕಾಲ ಮದುವೆಯಾಗದೆ ಉಳಿವವರು.

[6] ಸದ್ಯೋವಧುಗಳು: ಎಂದರೆ ವೇದಾಧ್ಯಯನವನ್ನು ಬಾಲ್ಯ ಕೌಮಾರ್ಯಗಳ ಕಾಲಗಳಲ್ಲಿ ಸಾಧ್ಯವಿದ್ದಷ್ಟು ಮಾಡಿ ಪ್ರಾಪ್ತ ವಯಸ್ಕರಾದ ಮೇಲೆ ಮದುವೆಯಾಗುವವರು.

[7] DWM (RD) P. No. 71.

[8] APVU (ABK) Vol. 31, p. 475, Women in India always suffered much from all religion – but by none has she been so thoroughly despised as by the Bramanas of period of Brahmanas.

[9] ವಚನಕಾರರ ದೃಷ್ಟಿಯದಲ್ಲಿ ಸ್ತ್ರೀ, ಪು. 22.

ಸೃಷ್ಟಿ ಸಂಕೇತ ಶಕ್ತಿ ಸ್ವರೂಪಿಣಿ ಪ್ರವೃತ್ತಿಯಲ್ಲಿ ಸುತ್ತಿಸುವವಳು ಅವಗುಣಗಳ ಸಂಕೇತವೆಂದೆ ಕರೆಯಲಾಗಿದೆ.

"ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ
ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ
ಕೂಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ
ನೀವೆ ಬಲ್ಲಿರಿ ಕೂಡಲ ಸಂಗಮದೇವ"[10]

ಈ ವಚನವನ್ನು ನೋಡಿದ್ದಾಗ ವಚನಕಾರರು ಹೆಣ್ಣನು ಮಾಯೆ ಎಂದು ಕರೆದು ಸೃಷ್ಟಿಯ ಸಂಕೇತವಾಗಿ ಪೂಜ್ಯಾ ಭಾವನೆಯಿಂದ ಕಾಣುತ್ತಿದ್ದರೆಂದು ತಿಳಿದು ಬರುತ್ತದೆ. ಇಲ್ಲಿ ಸ್ತ್ರೀ ಪುರುಷರು ಒಂದು ನಾಣ್ಯದ ಎರಡು ಮುಖಗಳಿದಂತೆ, ಅನ್ನುವ ಹಾಗೆ ಹೆಣ್ಣು ಕೂಡಾ ಪುರುಷನ ಸಮಾನಳಾದವಳು ಎಂದು ಗೌರವ ಭಾವನೆಯಿಂದ ಕಾಣಲಾಗುತ್ತಿತ್ತು. ವಚನಚಳವಳಿಯಲ್ಲಿ ಸ್ತ್ರೀಯು ತನ್ನ ವಚನಗಳ ಮೂಲಕ ಅನೇಕ ಪ್ರಶ್ನೆಗಳನ್ನು ಹಾಕಿದ್ದಾಳೆ. ಅದರಲ್ಲಿ ಕಾಯಕ, ಗುರು, ಲಿಂಗ, ಜಂಗಮ, ನಿಷ್ಠೆಯನ್ನು ಮೆರೆದ ಆಯ್ದಕ್ಕಿ ಲಕ್ಕಮ್ಮನು ತನ್ನ ಪತಿಯು ಶರಣ ದಾಸೋಹದಲ್ಲಿ ಬಿದ್ದ ಅಕ್ಕಿಯ ಕಾಳನ್ನು ಆಯ್ದು ತಂದು ದಾಸೋಹ ನಡೆಸುತ್ತಿದ್ರು. ಆದರೆ ಒಂದು ದಿನ ತಮಗೆ ಬೇಕಾಗಿದ್ದಕ್ಕಿಂತ ಹೆಚ್ಚಾಗಿ ಅಕ್ಕಿಯ ಕಾಳು ತಂದಿದ್ದ ಪತಿಯನ್ನೆ ಪ್ರಶ್ನೆಯಿಸುತ್ತಾಳೆ

ಆಸೆಯೆಂಬುದು ಅರಸಂಗಲ್ಲದೆ ಅಜಾತರಿಗುಂಟೇ
ರೋಷವೆಂಬುದು ಯಮದೂತರಿಗಲ್ಲದೆ ಶಿವಭಕ್ತರಿಗುಂಟೆಯ್ಯ
ಇಸಕ್ಕಿ ಆಸೆ ನಿಮಗ್ಯಾಕೆ[11]

ಎಂದು ಪ್ರಶ್ನೆ ಹಾಕುತ್ತಾಳೆ. ಇವು ಪುರುಷನೆ ಆಗಲಿ ಸ್ತ್ರೀನೆ ಆಗಲಿ ಯಾರಿಗಾದರು ಪ್ರಶ್ನೆ ಮಾಡುವಂತ ಹಕ್ಕನ್ನು ಹೊಂದಿದ್ದರು ಹಿಂದೆ ವೈದಿಕ ಧರ್ಮದಲ್ಲಿ ಹೆಣ್ಣಿನ ಧ್ವನಿ ಕಸಿದುಕೊಂಡು ಧ್ವನಿ ಇಲ್ಲದಂತೆ ಮಾಡಲಾಗಿತ್ತು. ಶರಣರ ಕಾಲಕ್ಕೆ ಮತ್ತೆ ಆ ಧ್ವನಿ ಜೀವಂತ ಪಡೆದು ಪ್ರಶ್ನೆ ಮಾಡುವ ತಾಕತ್ತು ಪಡೆದುಕೊಂಡಿತ್ತು.

ಭಾರತ ದೇಶದಲ್ಲಿ ಅನಿಷ್ಟವಾದ ವರ್ಣವ್ಯವಸ್ಥೆಗೆ ವಿರೋಧ ಬುದ್ಧನಿಂದಲೇ ಆರಂಭವಾಯಿತು. ಅದನ್ನು ಮುಂದೆ ಬಸವಾದಿ ಶರಣರು ಬಲವಾಗಿ ಪ್ರತಿಪಾದಿಸಿ ಅನುಷ್ಠಾನದಲ್ಲಿ ತಂದರು. ಹೀಗಾಗಿ ಶರಣರು ಹೆಣ್ಣು–ಗಂಡು ಎಂಬ ಬೇಧ ಭಾವವಿಲ್ಲ. ಆತ್ಮದ ದೃಷ್ಟಿಯಲ್ಲಿ ಇಬ್ಬರೂ ಸಮಾನರೇ, ಇವರ ಇಬ್ಬರಲ್ಲಿ ಸುಳಿಯುವ ಚೇತನ ಶಕ್ತಿ ಒಂದೇ ಎಂದು ವೈಜ್ಞಾನಿಕ ಹಿನ್ನಲೆಯಲ್ಲಿ ಹೇಳಿದ್ದಾರೆ.

"ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವ ಆತ್ಮ ಗಂಡೂ ಅಲ್ಲ ಹೆಣ್ಣೂ ಅಲ್ಲ
ಕಾಣ ರಾಮನಾಥ"[12]

ಇಲ್ಲಿ ಆತ್ಮಕ್ಕೆ ಯಾವ ಬಣ್ಣ, ರೂಪ, ಸ್ವರೂಪ, ಇಲ್ಲ ಅಂದ ಮೇಲೆ ಹೆಣ್ಣು ಕನಿಷ್ಠ ಗಂಡು ಶ್ರೇಷ್ಠ ಎಂದು ಹೇಗೆ ಅಳಿಯುವಿರಿ ಅಂತ ವೈದಿಕ ಪರಂಪರೆಗೆ ಪ್ರಶ್ನೆ ಮಾಡುತ್ತಾರೆ. 12ನೇ ಶತಮಾನದ ಚಳವಳಿಯು ಕ್ರಾಂತಿಯುತವಾತ್ತು ವಿನಹಾ ಇಲ್ಲಿ ಸ್ವಾತಂತ್ರ್ಯಸಿಗಲಿಲ್ಲ. ಯಾವ ಧರ್ಮ ಎಲ್ಲರನ್ನೂ ಸಮಾನರೂ ಎಂದು ಸಾರಿತೋ ಅದೇ ವೀರಶೈವರಿಂದಲೇ ಮತ್ತೆ ವೈದಿಕ ಪರಂಪರೆಗೆ ಮಣಿಯನ್ನು ಹಾಕಿಕೊಟ್ಟ ಕಾಲವಾಗಿತ್ತು. ಹೀಗೆ ಸಾವಿರಾರು ವರ್ಷಗಳ ನಂತರ ಅಧಿಕೃತವಾಗಿ ಸ್ವಾತಂತ್ರ್ಯ ಸಿಕ್ಕಿದ್ದು ಹೆಣ್ಣಿಗೆ ಬಾಬಾಸಾಹೇಬ್ ಡಾ. ಅಂಬೇಡ್ಕರ್ ಅವರು ಬರೆದಿರುವ 1950ರ ಸಂವಿಧಾನದ ಮೂಲಕವೇ ಹೊರತು ಬೇರೆ ಯಾವುದರಿಂದಲೂ ಸ್ವಾತಂತ್ರ್ಯ ಸಿಗಲಿಲ್ಲ. ಹೆಣ್ಣನ್ನು ಹೆತ್ತ ತಂದೆ, ಕಟ್ಟಿಕೊಂಡ ಗಂಡ ಮತ್ತು ಹೆತ್ತ ಮಗ ಕೈ ಬಿಟ್ಟರೂ ಬಾಬಾಸಾಹೇಬ್ ಅಂಬೇಡ್ಕರ್ ಬರೆದಿರುವ ಸಂವಿಧಾನ ಕೈ ಬಿಡಲಿಲ್ಲ.

---

10 ಸಮಗ್ರ ವಚನಗಳು

11 ಸಮಗ್ರ ವಚನ ಸಂಪುಟ

12 ಸಮಗ್ರ ವಚನ ಸಂಪುಟ